**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 381/2020 ಸಿಡಬ್ಲೂ: 8 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 07-08-2025

ಹೆಸರು : ಬೀರಪ್ಪ

ತಂದೆ ಹೆಸರು : ಅಯ್ಯಪ್ಪ

ವಯಸ್ಸು : 20 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಕೊಡ್ಲಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನ್ನ ಅಣ್ಣ. ಚಾ ಸಾ 6 ಮತ್ತು 7 ನನ್ನ ತಂದೆ ಮತ್ತು ತಾಯಿ. ಚಾಸಾ 9 ಮತ್ತು 10 ನಮ್ಮ ಊರಿನವರು. ಮಾಳಪ್ಪ ಈತನು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾನೆ.

ದಿ.24-06-2021 ರಂದು ಸುಮಾರು 10-30 ಗಂಟೆಗೆ ಮಾಲೀಕರ ಹೋಲಕ್ಕೆ ಹೋಗುತ್ತೇನೆ ಅಂತಾ ಮನೆಯಿಂದ ಹೋಗಿದ್ದನು. ಆಗ ನನ್ನ ಅಣ್ಣ ಮತ್ತು ಚಾ ಸಾ 10 ರವರು ನಮ ಮನೆಯಿಂದ ಕೆರೆ ಕಡೆಗೆ ಹೋಗುತ್ತಿದ್ದರು. ಆಗ ಒಂದು ಮೊಟಾರು ಸೈಕಲ್ ನಂ. ಎ ಪಿ 22 ಎ ಆರ್ 0667 ನೇದ್ದನ್ನು ಅತಿ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನಮ್ಮ ಅಣ್ಣ ಮಾಳಪ್ಪ ಈತನಿಗೆ ಡಿಕ್ಕಿ ಪಡಿಸಿದನು. ಆಗ ಚಾ ಸಾ 10 ರವರು ಕರೆ ಮಾಡಿ ಈ ವಿಷಯ ತಿಳಿಸಿದರು. ವಿಷಯ ಗೊತ್ತಾದಾಗ ನನ್ನ ಅಣ್ಣನಾದ ಚಾ ಸಾ 1 ಮತ್ತು 6 ರಮ ಹೋದರು ನಂತರ ನಾನು ಮತ್ತು ನನ್ನ ತಾಯಿಯಾದ ಚಾ ಸಾ 7 ರವರು ಹೋಗಿದ್ದೆ. ಘಟನಾ ಸ್ದಳಕ್ಕೆ ಹೋಗಿ ನೋಡಿದಾಗ ನಮ್ಮ ಅಣ್ಣನಾದ ಮೃತ ಮಾಳಪ್ಪ ಈತನ ತಲೆಗೆ ಗಾಯಗಳಾಗಿ ಬೆಹೋಷ್ ಆಗಿದ್ದನು. ನಂತರ ನಮ್ಮಅಣ್ಣ ಮಾಳಪ್ಪ ಈತನಿಗೆ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಕರೆದುಕೊಂಡು ಹೋದರು ತದನಂತರ ಕಲಬುರಗಿಯಲ್ಲಿರುವ ವಾತ್ಸಲ್ಯ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದೆವು. ಆಗ ಅಲ್ಲಿನ ವೈದ್ಯರು ನಮ್ಮ ಅಣ್ಣ ಮಾಳಪ್ಪ ಈತನು ಮೃತ ಪಟ್ಟಿದ್ದಾರೆ ಎಂದು ತಿಳಿಸಿದರು. ಸಾಕ್ಷಿಯು ಆರೋಪಿತನಿಗೆ ನೋಡಿ ಆ ದಿನ ಇವರೆ ವಾಹನ ಚಲಾಯಿಸುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಅಪಘಾತ ಮೊಟಾರು ಸೈಕಲ್ ಚಾಲಕನ ತಪ್ಪಿನಿಂದ ಆಗಿದೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ಅಪಘಾತ ನಾನು ನಾನು ಕಣ್ಣಾರೆ ಕಂಡಿಲ್ಲ ನಾನು ಪೋನು ಬಂದ ಮೇಲೆ ಹೋಗಿದ್ದೇನೆ. ಅಪಘಾತ ಆದಾಗ ನಾನು ಮನೆಯಲ್ಲಿ ಇದ್ದೆ. ಸದರಿ ಆರೋಪಿತನು ಮೋಟಾರು ಸೈಕಲ್ ಅತಿವೇಗದಿಂದ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸುತ್ತಿರುವ ಬಗ್ಗೆ ಚಾ ಸಾ 10 ರವರು ಹೇಳಿರುತ್ತಾರೆ. ಸದರಿ ಮೋಟಾರು ಸೈಕಲ್ ಎಷ್ಟು ಸ್ಪೀಡ್ದಿಂದ ಹೋಗುತ್ತಿತು ಎಂದು ನನಗೆ ಗೊತ್ತಿಲ್ಲ. ಮೃತ ಮಾಳಪ್ಪ ಮತ್ತು ಚಾ ಸಾ 10 ರವರಿಗೆ ಹೋರತು ಪಡಿಸಿ ಅವರೋಂದಿಗೆ ಬೇರೆ ಯಾರು ಇರಲಿಲ್ಲ. ಕೆ ಇ ಬಿ ಸ್ಟೇಷನ್ ದಿಂದ ಕೋಡ್ಲಾ ಗ್ರಾಮದ ವರೆಗೂ ಬಹಳಷ್ಟು ಹಂಪ್‌ಗಳು ಇವೆ ಎಂದರೆ ಸರಿಯಿಲ್ಲ. ಕೆ ಇ ಬಿ ಸ್ಟೇಷನ್ ಮುಂದುಗಡೆ ಒಂದು ಪೆಟ್ರೋಲ್ ಪಂಪ್ ಎದುರುಗಡೆ ಹಂಪ್ ಗಳು ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಅಪಘಾತ ಅಲ್ಲಿ ಆಗಿಲ್ಲ ಎಂದು ನುಡಿಯುತ್ತಾರೆ. ಪೆಟ್ರೋಲ್ ಪಂಪ್ ಬಲಗಡೆಗೆ ಶ್ರೀ ಸಿಮೆಂಟ್ ಫ್ಯಾಕ್ಟರಿ ಇದೆ ಎಂದರೆ ಸರಿ. ಅಲ್ಲಿಯು ಸಹ ಹಂಪ್‌ಗಳು ಹಾಕಿದ್ದಾರೆ ಎಂದರೆ ಸರಿಯಿಲ್ಲ. ಮೃತ ಮಾಳಪ್ಪ ನನ್ನ ಅಣ್ಣನಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನನ್ನ ಅಣ್ಣ ಮಾಳಪ್ಪ ಈತನು ಸ್ವತಃ ರಸ್ತೆ ದಾಟಲು ಹೋಗಿ ಮೋಟಾರು ಸೈಕಲ್ ಗೆ ಡಿಕ್ಕಿ ಪಡಿಸಿದನು ಎಂದರೆ ಸರಿಯಿಲ್ಲ. ಈ ಘಟನೆ ನಮ್ಮ ಅಣ್ಣನ ತಪ್ಪಿ ನಿಂದ ಆಗಿದೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**